## ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

## ಸಿ.ಸಿ. ಸಂಖ್ಯೆ: 72/2019

ಸಾಕ್ಷಿಯನ್ನು ದಿಃ **02.11.2022** ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.

| | | | |
|---|---|---|---|
| ಹೆಸರು | ಅರ್ಜನ್ ಲಾಲ್ | ಸಿಡಬ್ಲ್ಯೂ:8 | ಪಿಡಬ್ಲ್ಯೂ:5 |
| ತಂದೆಯ ಹೆಸರು | ಹೀರಾಲಾಲ್ | | |
| ವಯಸ್ಸು | 72 ವರ್ಷ | | |
| ಕೆಲಸ | ಪಾನ್ ಬ್ರೋಕರ್ | | |
| ವಾಸಸ್ಥಳ | ಪಿರಿಯಾಪಟ್ಟಣ | | |

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ**

ಸಾಕ್ಷಿಗೆ ತೋರಿಸಿದ ಅಮಾನತ್ತು ಮಹಜರ್ ನಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆಯನ್ನು ನಿಪಿ. 4 ಎಂದು ಸಾಕ್ಷಿಯ ಸಹಿಯನ್ನು ನಿಪಿ. 4(ಎ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ನಾನು ಯಾವಾಗ ಮಾಡಿದ್ದೇನೆ ಎಂದು ನನಗೆ ನೆನಪಿಲ್ಲ. ಯಾವ ವಿಚಾರದ ಸಂಬಂಧ ಮಾಡಿದ್ದೇನೆ ಎಂದು ಕೂಡ ನನಗೆ ನೆನಪಿಲ್ಲ. ಎಲ್ಲಿ ಮತ್ತು ಯಾರ ಸಮ್ಮುಖದಲ್ಲಿ ಮಾಡಿದ್ದೇನೆ ಎಂದು ಗೊತ್ತಿಲ್ಲ.

(ಈ ಹಂತದಲ್ಲಿ ಮಾನ್ಯ ಸಸಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿ ತನ್ನ ಸಾಕ್ಷ್ಯವನ್ನು ಅಭಿಯೋಜನೆಗೆ ಪ್ರತಿಕೂಲವಾಗಿ ನುಡಿದಿರುವ ಕಾರಣ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿಸಲಾಯಿತು)

**ಪಾಟೀಸವಾಲು ಸಸಅ ರವರಿಂದಃ–**

ದಿಃ 02.06.2018 ರಂದು ಪಿರಿಯಾಪಟ್ಟಣದಲ್ಲಿರುವ ನಮ್ಮ ಅಂಗಡಿಗೆ ಪೊಲೀಸರು ಅಮಾನತ್ತು ಮಹಜರ್ ಮಾಡಲು ಬಂದಿದ್ದರು ಎಂದರೆ ಸರಿಯಲ್ಲ. ಅಂದು ಪೊಲೀಸರು ಈಗ ನ್ಯಾಯಾಲಯ ಮುಂದಿರುವ 1, 3 ಮತ್ತು 4 ನೇ ಆರೋಪಿಗಳನ್ನು ಮತ್ತು ಚಾಸಾ 6 ಮತ್ತು 7 ರವರನ್ನು ನಮ್ಮ ಅಂಗಡಿಗೆ ಕರೆದುಕೊಂಡು ಬಂದು, ಆರೋಪಿಗಳು ನನ್ನ ಅಂಗಡಿಯಲ್ಲಿ ಗಿರವಿ ಇಟ್ಟಿದ್ದ ವಸ್ತುಗಳನ್ನು ತೋರಿಸಿ ಮಹಜರ್ ಅಡಿ ಅವುಗಳನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿಗಳು ನನ್ನ ಅಗಂಡಿಯಲ್ಲಿ 5 ಗ್ರಾಂ ನ ಬಿಳಿಯ ಹರಳಿನ ಚಿನ್ನದ ಉಂಗುರ, 1.608 ಗ್ರಾಂ ತೂಕದ ಚಿನ್ನದ ಉಂಗುರ, 2.730 ಗ್ರಾಂ ನ ಚಿನ್ನದ ಕಿವಿಯ ರಿಂಗು ಮತ್ತು 7.900 ಗ್ರಾಂ ನ ಚಿನ್ನದ ಚೈನು ಇವುಗಳನ್ನು ನಮ್ಮ ಅಂಗಡಿಯಲ್ಲಿ ಗಿರವಿ ಇಟ್ಟಿದ್ದರು ಎಂದರೆ ನನಗೆ ನೆನಪಿಲ್ಲ. ಈ ರೀತಿ ಆರೋಪಿಗಳು ನನ್ನಲ್ಲಿ ಈ ವಸ್ತುಗಳನ್ನು ರೂ. 10 ಸಾವಿರಗಳಿಗೆ ಗಿರವಿ ಇಟ್ಟು ನನ್ನಿಂದ 10 ಸಾವಿರಗಳನ್ನು ಪಡೆದುಕೊಂಡು ಯಾವುದೆ ಚೀಟಿಯನ್ನು ಪಡೆಯದೆ ಹೊರಟು ಹೋಗಿರುತ್ತಾರೆ ಎಂದು ಪೊಲೀಸರ ಮುಂದೆ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ.

ಪೊಲೀಸರು ಆ ರೀತಿ ಬಂದು ಮಹಜರ್ ಮಾಡಿದಾಗ ಸಮಯ 1 ರಿಂದ 2 ಗಂಟೆ ಆಗಿತ್ತು ಎಂದರೆ ನನಗೆ ನೆನಪಿಲ್ಲ. ಪೊಲೀಸನವರೊಂದಿಗೆ ಚಾಸಾ 6 ಮತ್ತು 7 ರವರು ಕೂಡ ಬಂದಿದ್ದು, ಅವರ ಸಮ್ಮುಖದಲ್ಲಿ ನಿಪಿ. 4 ರ ಮಹಜರ್ ಜರುಗಿಸಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಆ ದಿನ ಈಗ ನ್ಯಾಯಾಲಯದ ಮುಂದಿರುವ ಆರೋಪಿಗಳು ಕೂಡ ಪೊಲೀಸರ ಜೊತೆ ಇದ್ದರು ಎಂದರೆ ನನಗೆ ಗೊತ್ತಿಲ್ಲ. ನನಗೆ ಈ ಎಲ್ಲಾ ವಿಚಾರಗಳು ಗೊತ್ತಿದ್ದರೂ ಆರೋಪಿಗೆ ಸಹಾಯ ಮಾಡಲು ನನಗೆ ನೆನಪಿಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರು ನನ್ನ ಮುಂದೆ ಮಹಜರ್ ಮಾಡಿ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡು ನನ್ನ

ಸಹಿಯನ್ನು ಪಡೆದುಕೊಂಡಿದ್ದರು ಕೂಡ ಈ ಇಲ್ಲವೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ. 4 ರ ಮಹಜರ್ ವಿಚಾರಗಳನ್ನು ಪೊಲೀಸರು ನನಗೆ ಓದಿ ಹೇಳಿ ಆನಂತರ ನನ್ನ ಸಹಿ ಪಡೆದುಕೊಂಡಿದ್ದಾರೆ ಎಂದರೆ ಸರಿಯಲ್ಲ.

**ಪಾಟೀಸವಾಲು ಃಇಲ್ಲ**

**ಮರುವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಜೈಬುನ್ನಿಸಾ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.ಹುಣಸೂರು.